**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ.**
**ಸಿ.ಸಿ ನಂ. 1039/2023**

ಪಿರ್ಯಾದಿದಾರರುಃ ವಿರುದ್ಧ ಆರೋಪಿತರು

ಸರಕಾರದ ಪರವಾಗಿ
ಮಲೇಬೆನ್ನೂರು ಪೋಲಿಸ್ ಠಾಣೆ

1. ಕರಿಬಸಯ್ಯ ತಂದೆ ಲೇಟ್ ಉಜ್ಜಿನಯ್ಯ ,
48 ವರ್ಷ, ಶಿಕ್ಷಕರು,
2. ಶ್ರೀಮತಿ ಸವಿತ ತಂದೆ ಕರಿಬಸಯ್ಯ,
36 ವರ್ಷ, ಮನೆಗೆಲಸ,
3. ವೀರಯ್ಯ ತಂದೆ ಕಲ್ಯಾಣಯ್ಯ.,
67 ವರ್ಷ,ಕೃಷಿಕರು,
ಎಲ್ಲರ ವಾಸಃ ಕೊಮ್ಮರನಹಳ್ಳಿ ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 2 ಫ್ರಾಸಾ.1 ಪುಷ್ಪಾ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.03.2020 ರಂದು ತನ್ನ ಗಂಡ ಚಾಸಾ 4 ರವರು 1 ನೇ ಆರೋಪಿಗೆ ಆಸ್ತಿಯನ್ನು ಭಾಗ ಮಾಡಿಕೊಡು ಎಂದು ಕೇಳಿರುವುದಾಗಿ, ಆಗ 1 ನೇ ಆರೋಪಿಯು ತನ್ನ ಊರುಗೋಲಿನಿಂದ ಚಾಸಾ 4 ರವರ ತಲೆಗೆ ಹೊಡೆದಿರುವುದಾಗಿ, ಆಗ ಚಾಸಾ 4 ರವರಿಗೆ ರಕ್ತಗಾಯವಾಗಿದ್ದು, ನಂತರ ಅದೇ ದಿನ ಸಂಜೆ 7.30 ಗಂಟೆ ಸಮಯಕ್ಕೆ ಮಲೆಬೆನ್ನೂರು ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿರುವುದಾಗಿ, ಆಗ ಪೊಲೀಸರು ಮೊದಲು ಆಸ್ಪತ್ರೆಗೆ ಹೋಗಲು ತಿಳಿಸಿರುವುದಾಗಿ, ಆಗ ತಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಠಾಣೆಗೆ ಹೋದಾಗ ಅಲ್ಲಿನ ಪೊಲೀಸರು ದೂರು ಕೊಡಲು ಮಾರನೇ ದಿನ ಬೆಳಗ್ಗೆ ಬರಲು ಹೇಳಿರುವುದಾಗಿ, ನಂತರ ಮಾರನೇ ದಿನ ದೂರು ನೀಡಲು ಹೋಗುವ ಸಮಯದಲ್ಲಿ ದಾವಣಗೆರೆಯ ಧನಂಜಯ ಎನ್ನುವವರು ತಮಗೆ ದೂರವಾಣಿ ಕರೆ ಮಾಡಿ ಆರೋಪಿತರನ್ನು ಮತ್ತು ತಮ್ಮನ್ನು ಕರೆಸಿ ಪಂಚಾಯತಿ ಮಾಡುತ್ತೇನೆ ಎಂದು ಹೇಳಿರುವುದಾಗಿ, ನಂತರ ತಮ್ಮ ಹೊಲಕ್ಕೆ ಹೋಗಲು ದಾರಿ ಇರದೇ ಇದ್ದುದ್ದರಿಂದ ದಾರಿ ಮಾಡಿಕೊಡುವಂತೆ ದಿನಾಂಕ 26.11.2022 ರಂದು ಆರೋಪಿತರಿಗೆ ಕೇಳಿದ್ದು, ಆಗ ಆರೋಪಿತರು ನೀನೇ ಬೇಕಾದರೆ ಮಾಡಿಸಿಕೋ ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿ, ನಿಮ್ಮ ಹಾಗೆ ತಾನು ಹೆಂಡತಿಯನ್ನು ಮಲಗಿಸಿ ಯಾವ ಆಸ್ತಿಯನ್ನು ಹೊಡೆದಿಲ್ಲ

ಎಂದು ಹೇಳಿ, ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿಯು ತನ್ನ ತಲೆ ಕೂದಲನ್ನು ಹಿಡಿದು, ಹುಚ್ಚಿ ಎಂದು ಹೇಳಿ ತನ್ನನ್ನು ಅವಮಾನ ಪಡಿಸಿ ನಿಂದಿಸಿರುವುದಾಗಿ, 1 ನೇ ಆರೋಪಿಯು ತನ್ನ ಮಕ್ಕಳಿಗೆ ಮತ್ತು 2 ನೇ ಆರೋಪಿಗೆ ತನಗೆ ತನ್ನ ಮಕ್ಕಳಿಗೆ ಹೊಡೆಯುವಂತೆ ಕುಮ್ಮಕ್ಕು ನೀಡಿರುವುದಾಗಿ. 2 ನೇ ಆರೋಪಿಯು ತನ್ನ ಗಂಡನ ಕೈ ಹಿಡಿದು, 2 ನೇ ಆರೋಪಿಯು ತನ್ನ ಊರುಗೋಲಿನಿಂದ ಹೊಡೆದಿರುವುದಾಗಿ, ನಂತರ ದಿನಾಂಕ 29.11.2022 ರಂದು ಈ ವಿಚಾರವಾಗಿ ಠಾಣೆಗೆ ಹೋಗಿ ದೂರು ನೀಡಿರುವುದಾಗಿ, ದೂರಿನ ಆಧಾರದ ಮೇಲೆ ದಿನಾಂಕ 30.11.2022 ರಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಚಾಸಾ 2 ಮತ್ತು 3 ರವರ ಸಮಕ್ಷಮ ತಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಆ ಕಾಲಕ್ಕೆ ಕಚ್ಚಾ ನಕಾಶೆ ತಯಾರಿಸಿ, ಎರಡು ಛಾಯಾಚಿತ್ರವನ್ನು ತೆಗೆದಿರುವುದಾಗಿ, ಪಂಚನಾಮೆಯನ್ನು ಮಧ್ಯಾಹ್ನದ 2.45 ರಿಂದ 3.45 ಗಂಟೆವರೆಗೆ ಜರುಗಿಸಿರುವುದಾಗಿ. ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.1(ಎ) ಎಂದು, ಪಂಚನಾಮೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.2(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ.3 ಎಂದು ಗುರುತಿಸಿರುವುದಾಗಿ, ಸದರಿ ವಿಚಾರವಾಗಿ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಾಗಿ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 3 ಪ್ರಾಸಾ.2 ಗದಿಗೆಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1 ತನ್ನ ಹೆಂಡತಿ, ಚಾಸಾ 5 ಮತ್ತು 6 ಹಾಗೂ ಆರೋಪಿತರ ಪರಿಚಯ ಇರುವುದಾಗಿ, ದಿನಾಂಕ 26.11.2022 ರಂದು 1 ನೇ ಆರೋಪಿಗೆ ಆಸ್ತಿಯ ವಿಚಾರವಾಗಿ ಪಾಲುವಿಭಾಗ ಮಾಡಿಕೊಡಿ ಮತ್ತು ಹೊಲದಲ್ಲಿ ಓಡಾಡಲು ದಾರಿ ಮಾಡಿಕೊಡಿ ಎಂದು ಕೇಳಲು ಹೋದಾಗ 1 ನೇ ಆರೋಪಿಯು ನೀನೇ ಮಾಡಿಸಿಕೊ ಎಂದು ಹಲ್ಕಟ್ ಸೂಳೆಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ತನ್ನ ಬೆಂಬಲಕ್ಕೆ ತನ್ನ ಮಾವ ಇದ್ದಾನೆ ಎಂದು ಹೇಳಿ ಗಲಾಟೆ ಮಾಡಿರುವುದಾಗಿ, 3 ನೇ ಆರೋಪಿಯ ಕುಮ್ಮಕ್ಕಿನಿಂದ 1 ಮತ್ತು 2 ನೇ ಆರೋಪಿತರು ತನ್ನನ್ನು ಮತ್ತು ಚಾಸಾ 1 ರವರು ಹಿಡಿದು ಎಳೆದಾಡಿ, ತಮಗೆ ಜೀವ ಬೆದರಿಕೆ ಹಾಕಿದ್ದು, ನಂತರ ತಾನು ಮತ್ತು ಚಾಸಾ.1 ರವರು ದೂರನ್ನು ಸಲ್ಲಿಸಲು ಠಾಣೆಗೆ ಹೋದಾಗ ಪೊಲೀಸರು ಎರಡು ದಿನಗಳ ನಂತರ ಬರಲು ಹೇಳಿದ್ದು , ನಂತರ ದಿನಾಂಕ 29.11.2022 ರಂದು ದೂರು ಸಲ್ಲಿಸಿರುವುದಾಗಿ, ದಿನಾಂಕ 18.03.2020 ರಂದು ಸಂಜೆ 7.30 ಗಂಟೆಗೆ 1 ನೇ ಆರೋಪಿಗೆ ತಾವು ಪಾಲು ವಿಭಾಗ ಮಾಡಿಕೊಳ್ಳೋಣ ಎಂದು ಕೇಳಲು ಹೋದಾಗ, ತಾನು ಮಾಡಿಸಿಕೊಡುವುದಿಲ್ಲ, ನೀನು ಬೇಕಾದರೆ ಮಾಡಿಸಿಕೊ ಎಂದು ಹೇಳಿರುವುದಾಗಿ, ಆಗ 2 ನೇ ಆರೋಪಿಯು ತನ್ನ ಕೈಗಳನ್ನು ಹಿಂದೆ ಹಿಡಿದುಕೊಂಡಿದ್ದು,1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಊರುಗೋಲಿನಿಂದ ತನ್ನ ತಲೆಗೆ ಹೊಡೆದಿದ್ದು, ನಂತರ ತಾನು ದೂರು ಕೊಡಲು ಠಾಣೆಗೆ ಹೋದಾಗ ಪೊಲೀಸರು ತನಗೆ ನೀವು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವಂತೆ ಹೇಳಿದ್ದು, ಸದರಿ ವಿಚಾರವಾಗಿ ತಾನು ಪೊಲೀಸರ

ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 4 ಫ್ರಾಸಾ.3 ರಾಜಾನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ಹಾಗೂ 3 ರಿಂದ 6 ಹಾಗೂ ಆರೋಪಿತರ ಪರಿಚಯ ಇರುವುದಾಗಿ, ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ.2 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದು ಕಚ್ಚಾ ನಕಾಶೆ ಆಗಿದ್ದು ಅದನ್ನು ನಿಪಿ.3 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 3 ವರ್ಷಗಳ ಹಿಂದೆ ಚಾಸಾ.1 ರವರ ಮನೆ ಹತ್ತಿರ ಗಲಾಟೆ ವಿಚಾರವಾಗಿ ಸಹಿ ಮಾಡಿರುವುದಾಗಿ, ಸದರಿ ಗಲಾಟೆ ಚಾಸಾ.1, 4 ಮತ್ತು ಆರೋಪಿತರ ನಡುವೆ ಆಗಿರುತ್ತದೆ. ಈ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದರು. ಪೊಲೀಸರು ಸ್ಥಳಕ್ಕೆ ಮದ್ಯಾಹ್ನ 2.45 ರಿಂದ 3.00 ಗಂಟೆವರೆಗೆ ಮಾಡಿರುವುದಾಗಿ, ಸ್ಥಳದಲ್ಲಿ ಪೊಲೀಸರು ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆ ತಯಾರಿಸಿ ಫೋಟೋ ತೆಗೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳ ಪ್ರಿಂಟಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ತಾನು ಮತ್ತು ಚಾಸಾ.3 ರವರು ಸಹಿ ಮಾಡಿದ್ದು, ಪೊಲೀಸರಿಗೆ ತಾನು ಈ ಎಲ್ಲಾ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 5 ಫ್ರಾಸಾ.4 ಹನುಮಂತ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ರಿಂದ 4 ಮತ್ತು 6 ಹಾಗೂ ಆರೋಪಿತರ ಪರಿಚಯ ಇರುವುದಾಗಿ, ಈಗ್ಗೆ 3 ವರ್ಷಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಚಾಸಾ.4 ರವರು ತನ್ನನ್ನು ಅವರ ಹೊಲದಲ್ಲಿ ಕೆಲಸ ಮಾಡಲೆಂದು ಕರೆದಿದ್ದರು. ತಾನು ಸಾಮಾನು ತರಲು ಚಾಸಾ.4 ರವರ ಮನೆ ಹತ್ತಿರ ಹೋಗಿದ್ದೆ. ಸದರಿ ಸಂದರ್ಭದಲ್ಲಿ ಗಲಾಟೆಯಾಗುತ್ತಿತ್ತು. ಸದರಿ ಸಂದರ್ಭದಲ್ಲಿ ಚಾಸಾ.4, 1 ಮತ್ತು ಅವರ ಅಣ್ಣ ಹಾಗೂ ಅಣ್ಣನ ಕುಟುಂಬಸ್ಥರೊಂದಿಗೆ ಗಲಾಟೆಯಾಗುತ್ತಿತ್ತು. ಸದರಿ ಸಂದರ್ಭದಲ್ಲಿ 2 ನೇ ಆರೋಪಿ ಚಾಸಾ.1 ರವರಿಗೆ ಕೆಟ್ಟ ಕೆಟ್ಟದಾಗಿ ಬೈಯುತ್ತಿದ್ದರು. ಸದರಿ ಜಗಳ ಅವರ ಹೊಲದ ದಾರಿಯ ಸಲುವಾಗಿ ಆಗುತ್ತಿತ್ತು. ಪೊಲೀಸರಿಗೆ ತಾನು ಈ ಎಲ್ಲಾ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 6 ಫ್ರಾಸಾ.5 ಕಡೆಮನಿ ನಾಗಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 30.11.2022 ರಂದು ಚಾಸಾ.9 ರವರ ಠಾಣಾ ಗುನ್ನೆ ನಂ. 223/2022 ರಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ಜರುಗಿಸಲು ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದರು. ಅದರಂತೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಚಾಸಾ.9 ರವರ ಉಕ್ತಲೇಖನದನ್ವಯ ಸ್ಥಳ ಪಂಚನಾಮೆಯನ್ನು ಬೆರಳಚ್ಚು ಪಡಿಸಿರುವುದಾಗಿ, ಸಾಕ್ಷಿ ಸಾಕ್ಷಿಯು ಗುರುತಿಸಿದ ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 2.45 ರಿಂದ 3.45 ರವರೆಗೆ ಜರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 7 ಫ್ರಾಸಾ.6 ಎಂ.ಫೈರೋಜ ಖಾನ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 20.11.2022 ರಂದು ರಾತ್ರಿ 8.30 ಗಂಟೆಗೆ ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ ಚಾಸಾ.1 ರವರು ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.221/2022 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ ವ ವರದಿ ನಿವೇದಿಸಿಕೊಂಡಿದ್ದೇನೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ. ವ ವರದಿಯನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 6 (ಎ) ಎಂದು ಗುರುತಿಸಲಾಯಿತು. ದಿನಾಂಕಃ 30.11.2022 ರಂದು ಮದ್ಯಾಹ್ನ 2.45 ಗಂಟೆಗೆ ಕೃತ್ಯ ನಡೆದ ಸ್ಥಳ ಕೋಮಾರನಹಳ್ಳಿ ಗ್ರಾಮದ ಉಜ್ಜಿನಯ್ಯ ರವರ ಮಕ್ಕಳ ಹೆಸರಿನಲ್ಲಿರುವ ರಿ ಸರ್ವೆ ನಂ. 93/4 ಜಮೀನಿನಲ್ಲಿರುವ ಪಿರ್ಯಾದಿಯ ವಾಸದ ಮನೆಯ ಮುಂದೆ ಸ್ಥಳಕ್ಕೆ ಹೋಗಿ ಚಾಸಾ.8 ರವರ ಮೂಲಕ ಅಲ್ಲಿಯೇ ಇದ್ದ ಗ್ರಾಮದ ವಾಸಿಗಳಾದ ಚಾಸಾ.2 ಮತ್ತು 3 ರವರಿಗೆ ನೋಟಿಸ ನೀಡಿ ಸ್ಥಳಕ್ಕೆ ಬರಮಾಡಿಕೊಂಡಿರುವುದಾಗಿ, ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.7 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.7 (ಎ) ಎಂದು ಗುರುತಿಸಲಾಯಿತು. ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಮದ್ಯಾಹ್ನ 2.40 ರಿಂದ 3.45 ರವರೆಗೆ ಸ್ಥಳ ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆ ತೆಗೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಕಚ್ಚಾ ನಕಾಶೆಯನ್ನು ನಿಪಿ.3 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.3 (ಬಿ) ಎಂದು ಗುರುತಿಸಲಾಯಿತು. ಸದರಿ ಸಂದರ್ಭದಲ್ಲಿ ಚಾಸಾ.7 ರವರು ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.7 ರವರಿಂದ 65 ಬಿ

ಪ್ರಮಾಣ ಪತ್ರ ಪಡೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಪ್ರಮಾಣ ಪತ್ರವನ್ನು ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8 (ಎ) ಎಂದು ಗುರುತಿಸಲಾಯಿತು. ನಂತರ ಚಾಸಾ. 2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ.2 ರಿಂದ 6 ರವರ ಹೇಳಿಕೆ ಪಡೆದಿದ್ದು, ಅದೇ ದಿನ ಗಾಯದ ಪ್ರಮಾಣ ಪತ್ರ ಇಲ್ಲದ ಬಗ್ಗೆ ಚಾಸಾ.1 ರವರ ಮರುಹೇಳಿಕೆ ಪಡೆದಿರುದ್ದು, ನಂತರ ಆರೋಪಿತರ ವಿಚಾರಣೆ ಮಾಡಿ ಅವರ ಗುರುತಿನ ಚೀಟಿಗಳನ್ನು ಪಡೆದಿರುವುದಾಗಿ, ದಿಃ 08.07.2023 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 8 ಫ್ರಾಸಾ 7 ಡಾ.ಜಿ.ವಿ.ಲಕ್ಷ್ಮೀ ದೇವಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.03.2020 ರಂದು ರಾತ್ರಿ 08.03 ರ ಸುಮಾರಿಗೆ ಕೊಮಾರನಹಳ್ಳಿ ಗ್ರಾಮದ 42 ವರ್ಷ ವಯಸ್ಸಿನ ಎಂ. ಗದಿಗೆಯ್ಯ ಬಿನ್ ಉಜಿನಯ್ಯ ಅಂದರೆ ಚಾಸಾ.4 ಎಂಬುವವರು ಸಂಜೆ 7.00 ಗಂಟೆಗೆ ಕೊಮಾರನಹಳ್ಳಿಯಲ್ಲಿ ತಮ್ಮ ಸಹೋದರರು ಮರದ ಕೋಲುಗಳಿಂದ ಹಲ್ಲೆ ನಡೆಸಿದ ಸನ್ನಿವೇಶದೊಂದಿಗೆ ಚಿಕಿತ್ಸೆಗೆ ತಮ್ಮನ್ನು ಸಂಪರ್ಕಿಸಿದ್ದು, ಅವರನ್ನು ಪರೀಕ್ಷಿಸಿದಾಗ ಈ ಗಾಯಗಳು ತಮ್ಮ ಗಮನಕ್ಕೆ ಬಂದಿರುತ್ತವೆ. 1. ಕಿವಿಯ ಕೆಳಗೆ 3 ಸೆಂ.ಮಿ X 1 ಸೆಂ.ಮೀ ಉದ್ದದ ಗಾಯ ಮತ್ತು ಅದು ರಕ್ತದ ಗಾಯವಾಗಿತ್ತು., 2. ಕುತ್ತಿಗೆಯ ಎಡಭಾಗದಲ್ಲಿ ಸವೆತ, ಮಣಿಕಟ್ಟಿನ ಕೆಳಗೆ ಎಡಗೈಯಲ್ಲಿ ಸವೆತ ಆಗಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಹೇಳಲಾದ ಗಾಯಗಳು ಸರಳ ಸ್ವರೂಪದಾಗಿದ್ದು, ಆ ಕುರಿತು ತಾನು ನಿಪಿ.9 ರಂತೆ ಎಂ ಎಲ್ ಸಿ ಯನ್ನು ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1 :

ಆ.2 :

ಆ.3 :

ಪ್ರಶ್ನೆಃ 9 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ ಆ.1:

ಆ.2:

ಆ.3:

ಪ್ರಶ್ನೆಃ 10 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆ.1:

ಆ.2:

ಆ.3:

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 10.04.2026 C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.